



## ಆಭರಣ ಲೋಕದ ಸುಂದರಿ ಆ್ಯಂಟಿಕ್ ಒಡವೆ

**ಸಾಂಪ್ರದಾಯಿಕ ನೋಟ ನೀಡುವ ಪುರಾತನ ಶೈಲಿಯ ಆ್ಯಂಟಿಕ್ ಒಡವೆಗಳು ಸಾರ್ವಕಾಲಿಕ ಮೆಚ್ಚುಗೆ ಪಡೆದವುಗಳು. ಕಿವಿಯೋಲೆ, ನೆಕ್ಲೇಸ್, ಹಾರ, ಪೆಂಡೆಂಟ್, ರಿಂಗ್, ಸೊಂಟಪಟ್ಟಿ, ಬಳೆ ಎಲ್ಲದರಲ್ಲೂ ಆ್ಯಂಟಿಕ್ ಟಚ್ ನೀಡುವ ಒಡವೆಗಳು ಬಂದಿವೆ. ಇವು ಸಾಂಪ್ರದಾಯಿಕ, ಪಾಶ್ಚಾತ್ಯ ಹಾಗೂ ಸಮಕಾಲೀನ ದಿರಿಸುಗಳಿಗೂ ಹೊಂದಿಕೊಳ್ಳುವ ಜೊತೆಗೆ ಎಲ್ಲ ಬಗೆಯ ಮೈಬಣ್ಣಕ್ಕೆ ಹೊಂದಿಕೊಂಡು ಚೆಲುವಿನ ಖನಿಯಂತೆ ಕಂಗೊಳಿಸುತ್ತವೆ.**



ಆ್ಯಂಟಿಕ್ ಆಭರಣಗಳು ಕಪ್ಪು ಛಾಯೆಯಲ್ಲಿ ಮಿನುಗುತ್ತವೆ.

ಪ್ರಾಚೀನ ದೇವಾಲಯಗಳಲ್ಲಿರುವ ಸುಂದರ ಕೆತ್ತನೆಗಳು, ಲಕ್ಷ್ಮಿ, ಗಣೇಶ, ವೆಂಕಟೇಶ, ಸರಸ್ವತಿ, ಶಾರದಾ ದೇವರ ಕಲಾಕೃತಿಗಳು, ನವಿಲು, ರಾಧೆ– ಕೃಷ್ಣರನ್ನು ಚಿನ್ನದಲ್ಲಿ ಕಡೆದು ಬಣ್ಣದ ಹರಳು, ಮುತ್ತುಗಳನ್ನು ಅಂಟಿಸಿ ಸೃಷ್ಟಿಸುವ ಒಡವೆಗಳು ಅಧ್ಯಾತ್ಮ, ಭಕ್ತಿ, ಸೌಂದರ್ಯ, ಶೃಂಗಾರ ಭಾವಗಳ ಬುಗ್ಗೆಯನ್ನು ಚಿಮ್ಮಿಸುತ್ತವೆ. ಕೊರಳನ್ನಪ್ಪುವ ಅಗಲದ ನೆಕ್ಲೇಸ್, ಝುರಿಯಂಚಿನ ಸೆರಗಿನ ಮೇಲೆ ಇಳಿಬೀಳುವ ಉದ್ದನೆಯ ಹಾರ, ಗಜಗಾತ್ರದ ಪೆಂಡೆಂಟ್, ಹೂವಿನಷ್ಟು ಹಗುರಾದ ದೊಡ್ಡ ಜುಮ್ಕಾ, ನವಿರಾದ ಸೊಂಟಪಟ್ಟಿ, ಕತ್ತು ತಿರುಗಿದಂತೆ ಅತ್ತಿತ್ತ ಓಲಾಡುವ ಬೈತಲೆ ಬೊಟ್ಟು ಒಳಗೊಂಡ ಸೆಟ್ ಆಭರಣಗಳು ಸಾಕ್ಷಾತ್ ದೇವತೆಯೇ ಧರೆಗವತರಿಸಿದ ನೋಟ ಬೀರುತ್ತವೆ.

### ತಂತ್ರಜ್ಞಾನವೇ ವರ

ಚಿನ್ನದ ದರ ಏರಿಕೆಯಾದರೂ ಗ್ರಾಹಕರ ಸಂಖ್ಯೆಗೇನು ಕೊರತೆಯಿಲ್ಲ. ಬಂಗಾರದ ಪ್ರೀತಿಯೇ ಭಾರತೀಯರ ಹೆಚ್ಚುಗಾರಿಕೆ. ಗ್ರಾಹಕರು ತಮ್ಮ ಬಜೆಟ್‌ಗೆ ತಕ್ಕಂತೆ ಒಡವೆಗಳನ್ನು ಖರೀದಿಸುತ್ತಾರೆ. ಹಿಂದೆ, ತೂಕ ನೋಡಿ ಖರೀದಿಸುವವರು, ಈಗ ದರ ನೋಡಿ ನಿರ್ಧರಿಸುತ್ತಾರೆ, ದೃಷ್ಟಿಕೋನ ಬದಲಾಗಿದೆಯಷ್ಟೆ. 40 ಗ್ರಾಂ ಬಂಗಾರದಲ್ಲಿ ಸಿದ್ಧಪಡಿಸುತ್ತಿದ್ದ ಆಭರಣಗಳನ್ನು ಈಗ ತಂತ್ರಜ್ಞಾನ ಬಳಸಿ, 20 ಗ್ರಾಂನಲ್ಲಿ ಸಿದ್ಧಪಡಿಸುತ್ತೇವೆ. ಆದರೆ, ಈ ಲಘು ಒಡವೆಗಳು ನಿತ್ಯದ ಬಳಕೆಗೆ ಹೆಚ್ಚು ಸೂಕ್ತವಲ್ಲ, ವಿಶೇಷ ಸಮಾರಂಭಗಳಲ್ಲಿ ಶ್ರೀಮಂತ ನೋಟಕ್ಕಾಗಿ ಸೃಷ್ಟಿಯಾಗುವವು ಇವು. ಬಾಳಿಕೆ ದೃಷ್ಟಿಯಿಂದ ತುಸು ಘನವಾದುದನ್ನು

**ಕಡಿಮೆ ತೂಕದ ಆಭರಣಗಳಲ್ಲಿ ಯುವತಿಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವುದು 'ಟೆಂಪಲ್ ಜುವೆಲ್ಲರಿ' ಮತ್ತು ಆ್ಯಂಟಿಕ್ ಆಭರಣಗಳು.**

ಆರಿಸುವುದು ಒಳ್ಳೆಯದು ಎನ್ನುತ್ತಾರೆ ಮಂಗಳೂರು ಕಾರ್‌ಸ್ಟ್ರೀಟ್‌ನ ಅರುಣ್ ಜ್ಯುವೆಲ್ ಆ್ಯಂಡ್ ಡೈಮಂಡ್ಸ್ ವರ್ಕ್ಸ್‌ನ ಅರುಣ್ ಜಿ. ಶೇಟ್.

ಮಹಾರಾಷ್ಟ್ರ ಕೊಲ್ಹಾಪುರಿ ವಿನ್ಯಾಸದ ತುಸಿ (Tusi) ಗೋಲ್ಡ್ ಈಗ ಎಲ್ಲೆಡೆ ಪ್ರಚಲಿತ. 30–35 ಗ್ರಾಂ ಚಿನ್ನದಲ್ಲಿ ಸಿದ್ಧವಾಗುವ ನೆಕ್ಲೇಸ್ ಅನ್ನು ತುಸಿ ಗೋಲ್ಡ್ ಮಾದರಿಯಲ್ಲಿ ನೋಟದಲ್ಲಿ ಕೊಂಚವೂ ಬದಲಾವಣೆ ಇಲ್ಲದಂತೆ 6 ಗ್ರಾಂ ಚಿನ್ನದಲ್ಲಿ ತಯಾರಿಸಬಹುದು. ಪೊಳ್ಳಾದ ರೋಪ್‌ಗಳು, ಬಾಲ್‌ಗಳು ಒಡಲೊಳಗೆ ವ್ಯಾಕ್ಸ್ (ಅರಗು) ತುಂಬಿಕೊಂಡು ಎದೆಯುಬ್ಬಿಸಿ ಮಿನುಗುತ್ತವೆ. ಇವು ಗ್ರ್ಯಾಂಡ್ ಲುಕ್ ನೀಡುತ್ತವೆ. ಬಂಗಾರದ ಬೆಲೆ ಹೆಚ್ಚಾದ ಮೇಲೆ ಶೇ 70ರಷ್ಟು ಗ್ರಾಹಕರಿಗೆ ಇಂತಹುದೇ ಆಭರಣ ಅಚ್ಚುಮೆಚ್ಚು ಎನ್ನುವುದು ಅವರ ಅನುಭವ.

ಬಂಗಾರದ ತೆಳುವಾದ ತಗಡಿನ ಎಳೆಯನ್ನು ಚೆಂಡಿನಾಕೃತಿಗೆ ಪರಿವರ್ತಿಸಿ ಪೋಣಿಸಿದ ನೆಕ್ಲೇಸ್‌ಗಳು ಕಣ್ಸೆಳೆಯುತ್ತವೆ. ಇವು ಹತ್ತಿಯಷ್ಟೇ ಹಗುರ. ಸಾಂಪ್ರದಾಯಿಕ ಮಾದರಿಯ

